ಸಿ.ಡಬ್ಲ್ಯೂ–1

ಪಿ.ಡಬ್ಲ್ಯೂ–1

ದಿನಾಂಕ: 29–11–2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೆ ಕರಿಸಲಾಯಿತು.

**<u>ಮುಂದುವರೆದ ಮುಖ್ಯ ವಿಚಾರಣೆಃ</u> ಸರಕಾರದ ಪರವಾಗಿ ಸ .ಸ. ಆ ರವರಿಂದ**

**5**. ನಾನು ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿರುತ್ತೇನೆ. ಪ್ರಥಮ ವರ್ತಮಾನ ವರದಿಯನ್ನು ನೋಡುತ್ತಿದ್ದು ನಿಪಿ–2 ಎಂದು, ಸಾಕ್ಷಿಯ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಾಯಿತು ಸ್ಥಳದಲ್ಲಿದ್ದ ವಾಹನ ಮತ್ತು ಮುದ್ದೆಮಾಲುಗಳನ್ನು ಭದ್ರತೆಗಾಗಿ ವಲಯ ಕಚೇರಿ ಆವರಣಕ್ಕೆ ಸಾಗಾಟ ಮಾಡಿ, ಪಂಚರ ಸಮಕ್ಷಮದಲ್ಲಿ ಚಾಯಾ ಚಿತ್ರವನ್ನು ತೆಗೆದಿರುತ್ತೇವೆ. ಸದ್ರಿ ಚಾಯಾ ಚಿತ್ರಗಳನ್ನು ನೋಡುತ್ತಿದ್ದು, ಅವುಗಳನ್ನು ಆರೋಪಿ ಪರ ವಕೀಲರ ತಕರಾರಿಗೆ ಒಳಪಟ್ಟು ನಿಪಿ–3 ರಿಂದ 6 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ 1 ಮತ್ತು 2 ಆರೋಪಿಯನ್ನು ನೋಡಿ ಗುರುತಿಸುತ್ತಿದ್ದೇನೆ.

**6.** ದಿನಾಂಕಃ 26–08–2022 ರಂದು 2 ನೇ ಆರೋಪಿ ಯನ್ನು ವಿಚಾರಣೆಗಾಗಿ ವಲಯ ಕಚೇರಿಗೆ ಕರೆದಿರುತ್ತಾರೆ. ವಿಚಾರಣಾ ಸಂದರ್ಭದಲ್ಲಿ 2 ನೇ ಆರೋಪಿ ತಾನು ಕಡಿದಿರುವ ಮರದ ಬುಡಚಿಯನ್ನು ತೋರಿಸಿಕೊಡುತ್ತೇನೆ ಎಂದು ಹೇಳಿರುತ್ತಾರೆ. ಹಾಗಾಗಿ ಪಂಚರಾದ ಚಾಸಾ–2 ಮತ್ತು 3, ಮತ್ತು ಮೇಲಾಧಿಕಾರಿಯಾದ ಚಾಸಾ –5 ಹಾಗೂ ನಾನು ಆರೋಪಿಯ ಜೊತೆಗೆ ಇಲಾಖಾ ವಾಹನದಲ್ಲಿ ಅಡ್ಲೂರು ಗ್ರಾಮದ ಅರಣ್ಯ ಸರ್ವೆ ನಂ 77 ರ ಹತ್ತಿರ ಹೋದಾಗ , 2 ನೇ ಆರೋಪಿಯನ್ನು ಕಡಿದಿರುವ ಸ್ಥಳ ತೋರಿಸಲು ಹೇಳಿದಾಗ, ಅಲ್ಲಿಂದ ಕಾಡಿನ ಒಳಗೆ 300 ಮೀಟರ್ ಒಳಗಡೆ ಕರೆದುಕೊಂಡು ಹೋಗಿ, ಸಾಗಾವಾಣಿ ಮರದ ಒಂದು ಬುಡಚಿಯನ್ನು ಅವರು ತೋರಿಸಿದರು. ಆ ಸಂದರ್ಭ ದಲ್ಲಿ 2 ನೇ ಆರೋಪಿ, ತಾನು ಮತ್ತು 1 ನೇ ಆರೋಪಿ ಸೇರಿ ಆ ಸಾಗುವಾಣಿ ಮರವನ್ನು ಕಡಿದಿರುವುದಾಗಿ

ತಿಳಿಸಿದರು. ಅಲ್ಲಿಂದ ಪಶ್ಚಿಮ ದಿಕ್ಕಿಗೆ 8 ಮೀಟರ್ ದೂರ ಹೋಗಿ, ಇನ್ನೊಂದು ಸಾಗುವಾಣಿ ಜಾತಿ ಮರದ ಬುಡಚಿಯನ್ನು ತೋರಿಸಿದರು. ಅಲ್ಲಿಂದ 20 ಮೀಟರ್ ಉತ್ತರ ದಿಕ್ಕಿಗೆ ಹೋಗಿ , ಮತ್ತೊಂದು ಸಾಗುವಾಣಿ ಜಾತಿ ಮರದ ಬುಡಚಿಯನ್ನು ತೋರಿಸಿದರು. ಅಲ್ಲಿಂದ 29 ಮೀಟರ್ ದೂರ ಹೋಗಿ, ಮಗದೊಂದು ಸಾಗುವಾಣಿ ಜಾತಿ ಮರದ ಬುಡಚಿಯನ್ನು ತೋರಿಸಿದರು. ಆ 4 ಬುಡಚಿಯ ಮರಗಳನ್ನು ತಾನು ಹಾಗೂ 1 ನೇ ಆರೋಪಿ ಸೇರಿ ಕಡಿದಿರುವುದಾಗಿ, 2 ನೇ ಆರೋಪಿ ಹೇಳಿದರು. ಅಲ್ಲಿ ಆ 4 ಬುಡಚಿಗಳ ಛಾಯಾ ಚಿತ್ರಗಳನ್ನು ತೆಗೆಯಲಾಯಿತು. ಅಲ್ಲದೇ ಸ್ಥಳದಲ್ಲಿ ಪಂಚನಾಮೆಯನ್ನು ಬರೆಯಲಾಯಿತು. 4 ಬುಡಚಿಗಳ ಅಳತೆಗಳನ್ನು ತೆಗೆಯಲಾಯಿತು. ಸದ್ರಿ ಪಂಚನಾಮೆಯನ್ನು ನೋಡುತ್ತಿದ್ದು, ಅದನ್ನು ನಿಪಿ-7 ಎಂದು, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಸದ್ರಿ ಚಾಯಾ ಚಿತ್ರಗಳನ್ನು ನೋಡುತ್ತಿದ್ದು, ಅವುಗಳನ್ನು ಆರೋಪಿ ಪರ ವಕೀಲರ ತಕರಾರಿಗೆ ಒಳಪಟ್ಟು ನಿಪಿ-8 ಮತ್ತು 9 ಎಂದು ಗುರುತಿಸಲಾಯಿತು. ಮೇಲ್ಕಂಡ ಛಾಯಾ ಚಿತ್ರಗಳ ಬಾಬ್ತು ಸಿಡಿಯನ್ನು ಹಾಜರು ಪಡಿಸಿದ್ದು, ಅದನ್ನು ಆರೋಪಿ ಪರ ವಕೀಲರ ತಕರಾರಿಗೆ ಒಳಪಟ್ಟು ನಿಪಿ-10 ಎಂದು ಗುರುತಿಸಲಾಯಿತು.

**7.** ಮೇಲೆ ಹೇಳಿದಂತಹ 4 ಬುಡಚಿಗಳ ಮೇಲೆ ಪ್ರಥಮ ವರ್ತಮಾನ ವರದಿಯ ಸಂಖ್ಯೆ, ಅರಣ್ಯ ರಕ್ಷಕ ಅಡ್ಲೂರು ಗಸ್ತಿನವರ ಮೊಹರ ನ್ನು ಹಾಕಲಾಯಿತು. ಸ್ಥಳದಲ್ಲಿಯೇ rout ಮ್ಯಾಪ್ ನ್ನು ತಯಾರಿಸಲಾಯಿತು. ಅಲ್ಲದೇ ಗ್ರಾಮ ನಕಾಶೆಯಲ್ಲಿ ಗುನ್ನೆ ನಡೆದ ಸ್ಥಳವನ್ನು ಗುರುತಿಸಲಾಯಿತು. ಸದ್ರಿ 2 ದಾಖಲೆಗಳನ್ನು ನೋಡುತ್ತಿದ್ದು, ಅವುಗಳನ್ನು ಕ್ರಮವಾಗಿ ನಿಪಿ-11 ಮತ್ತು 12 ಎಂದು, ಸಾಕ್ಷಿಯ

ಸಿ.ಡಬ್ಲ್ಯೂ-1

ಪಿ.ಡಬ್ಲ್ಯೂ-1

ಸಹಿಗಳನ್ನು ಕ್ರಮವಾಗಿ ನಿಪಿ-11 (ಎ) ಮತ್ತು 12 (ಎ) ಎಂದು ಗುರುತಿಸಲಾಯಿತು. ಈ ಬಾಬ್ತು ತನಿಖಾಧಿಕಾರಿಗೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲನ್ನು   ವಕೀಲ ರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು  ಮಾಡಿಸಲಾಯಿತು)

ಓ  ಹೇ ಕೆ ಸರಿ ಇದೆ.

ಹಿರಿಯ  ಸಿವಿಲ್  ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.